(ix) ಹುಮ್ನಾಬಾದಿನಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆಯ ಲೋಪ

ಶ್ರೀ ಭೀಮಣ್ಣ ಖಂಡ್ರೆ(ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಮಸ್ಯೆ ಇದ್ದು ಬೀದರ್ ಜಿಲ್ಲೆಯಲ್ಲಂತೂ ಈ ಪರಿಸ್ಥಿತಿ ಬಹಳ ಹದಗೆಟ್ಟಿದೆ. ನಿನ್ನೆ ಬಸವರಾಜ್ ಪಾಟೀಲ್ ಅವರು ಹುಮ್ನಾಬಾದ್ ಬಗ್ಗೆ ಹೇಳಿದರು. ಅದಕ್ಕೂ ಮೊದಲು ನಾನು ಒಂದು ಪ್ರಶ್ನೆ ಹಾಕಿದ್ದೆ. ಈಗ ನಾನು ಬೀದರ್ ಜಿಲ್ಲೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಭಾಲ್ಕಿಯಲ್ಲಿ, ಬೀದರ್‌ನಲ್ಲಿ ಹುಮ್ನಾಬಾದ್‌ನಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿಲ್ಲ. ನಾಲ್ಕೈದು ಸ್ಥಳಗಳಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಬರುವುದು ಕಷ್ಟವಾಗಿದೆ. ಕೆಲವು ಹೆಣ್ಣುಮಕ್ಕಳು ಗಣೇಶಪುರವಾಡಿಯಿಂದ ಅಕ್ಕಮಹಾದೇವಿ ಕಾಲೇಜಿಗೆ ಬರುವಾಗ 4-5 ಮಂದಿ ಹುಡುಗರು ಚುಡಾಯಿಸಿದಾಗ ಹೊಡೆದಾಟ ಆಯಿತು. ಆಗ ಬೇರೆ ಜನರು ಬಂದು ಬಿಡಿಸಿದರು ಒಬ್ಬ ಬ್ಲಾಕ್‌ಸ್ಮಿತ್ ಹೆಂಡತಿಗೂ ಕೂಡ ಹೊಡೆಯಲು ಪ್ರಯತ್ನ ಮಾಡಿದರು. ಈ ರೀತಿ ನಾಲ್ಕೈದು ಗಲಾಟೆಗಳಾಗಿ ಒಂದು ಮರ್ಡರ್ ಕೂಡ ಆಯಿತು ಅಲ್ಲಿನ ಜನ ಭಯ ಭೀತರಾಗಿದ್ದಾರೆ. ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಜನರು ಓಡಾಡುವುದಕ್ಕೂ ಹೆದರುತ್ತಿದ್ದಾರೆ. ಇನ್ನೂ ಸೆಂಟ್ ಜನರಿಗೆ ರಕ್ಷಣೆ ಇಲ್ಲ. ಗೂಂಡಾಗಳ ರಾಜ್ಯ ಆಗಿದೆ. ನಾನು 8 ದಿವಸಕ್ಕೆ ಮೊದಲು ಅಲ್ಲಿಗೆ ಹೋಗಿದ್ದಾಗ ಎಲ್ಲ ಪಕ್ಷದವರನ್ನು, ಎಲ್ಲ ಜಾತಿಯವರನ್ನು ಕರೆಸಿ ಕೇಳಿದಾಗ ಡಿ.ವೈ ಎಸ್.ಪಿ.ಯವರು ಹೇಳಿದರು. ಏನು ಮಾಡುವುದು ನಾವು ಕ್ರಮ ತೆಗೆದುಕೊಂಡರೂ ಕಷ್ಟ, ತೆಗೆದುಕೊಳ್ಳದಿದ್ದರೂ ಕಷ್ಟ ಎಂದು ಹೇಳಿದರು. ಷುಗರ್ ಫ್ಯಾಕ್ಟರಿಯಲ್ಲಿ ನಿಮ್ಮ ಜೀವ ಉಳಿಸುವ ಸಲುವಾಗಿ ಕ್ರಮ ತೆಗೆದುಕೊಂಡಿದ್ದಕ್ಕೆ ಡಿ.ವೈ.ಎಸ್.ಪಿ ಯವರು ಹೊರಟು ಹೋದರು. ಆದ್ದರಿಂದ ನ್ಯಾಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೂ ಕಷ್ಟವಾಗಿದೆ ಎಂದು ಹೇಳಿದರು. ಪೋಲೀಸರೂ ಕೂಡ ಸರಿಯಾಗಿ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾನು ಡಿ.ಜಿ.ಪಿ.ಯವರಿಗೆ ಎರಡು ಮೂರು ಪತ್ರ ಬರೆದು ವಿಷಯ ತಿಳಿಸಿದ್ದೇನೆ. ಮುನ್ಸಿಪಲ್ ಎಲೆಕ್ಷನ್ ಸಮಯದಲ್ಲಿ ಯಾವ ರೀತಿ ಚಳುವಳಿ ಆಯಿತು, ಅನ್ಯಾಯ ಆಯಿತು ಎಂಬ ಬಗ್ಗೆ ಗರುಡಾಚಾರ್ ಅವರಿಗೆ ಬರೆದು ತಿಳಿಸಿದ್ದೇನೆ. ಮೊದಲು ಪೋಲೀಸ್ ರಾಜ್ಯ ಆಗಿದೆ ಎಂದು ಹೇಳುತ್ತಿದ್ದೆವು. ಈಗ ಪೋಲೀಸ್ ರಾಜ್ಯ ಇಲ್ಲ, ಗೂಂಡಾ ರಾಜ್ಯವಾಗಿದೆ. ಆ ದೃಷ್ಟಿಯಿಂದ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ಜನರ ರಕ್ಷಣೆ ಆಗಬೇಕಾದರೆ, ಹೆಣ್ಣು ಮಕ್ಕಳು ಮಾನ ಮರ್ಯಾದೆಯಿಂದ ಓಡಾಡುವುದಕ್ಕೆ ವ್ಯವಸ್ಥೆ ಆಗಬೇಕಾದರೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ಸರ್ಕಾರದ ನೀತಿ ಏನು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗ ನೋಡಿದರೂ ಈಗ ಚಾಕು ಚೂರಿ ಕಾಲ ಹೋಯಿತು ಎಂದು ಹೇಳುತ್ತಿರುತ್ತಾರೆ. ಈಗ ಚಾಕು ಚೂರಿ ಕಾಲ ಬಂತು ಎಂದು ನಾನು ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂದು ತಿಳಿಯಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಚಾಕು ಚೂರಿ ಕಾಲವನ್ನು ಪುನಃ ತರುವ ಪ್ರಯತ್ನ ನಡೆಯುತ್ತಿದೆ. ಆದರೆ ಆ ಪ್ರಯತ್ನ ಯಶಸ್ವಿಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಭಾಲ್ಕಿಯಲ್ಲಿ ಕೆಲವು eve teasing — ಮತ್ತು ಗೂಂಡಾಗಿರಿ ಆಗಿದ್ದು ನಿಜ. ಅದರ ಬಗ್ಗೆ ಕೂಡಲೇ ಸ್ಥಳೀಯ ಪೋಲೀಸರು ಸಂಬಂಧಪಟ್ಟವರನ್ನು ದಸ್ತಗಿರಿ ಮಾಡಿದ್ದಾರೆ. ಕೇಸನ್ನೂ ಹಾಕಿದ್ದಾರೆ. ಯಾರು ಯಾರ ಮೇಲೆ ಕೇಸ್ ಹಾಕಿದ್ದಾರೆ ಎಂಬುದನ್ನು ಹೇಳಬೇಕಾ?

ಶ್ರೀ ಭೀಮಣ್ಣ ಖಂಡ್ರೆ.— ಹೇಳಿ. ನಮಗೇನೂ ತೊಂದರೆಯಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಹೆಸರನ್ನೆಲ್ಲಾ ಓದಬೇಕಾದರೆ ಸಮಯ ಹಿಡಿಯುತ್ತದೆ. ಅದನ್ನೆಲ್ಲಾ ಓದುವುದು ಏತಕ್ಕೆ ಎಂದು ಹೇಳಿದೆ, ಅಷ್ಟೆ. ಬೇರೆ ಉದ್ದೇಶವೇನೂ ಇಲ್ಲ. ಮಟ್ಕಾ ಆಗಿರಲಿ, ಹೆಣ್ಣು ಮಕ್ಕಳನ್ನು ಚುಡಾಯಿಸುವ ವಿಚಾರ ಆಗಿರಲಿ ಇಂಥ ವಿಷಯಗಳಲ್ಲಿ ನಾವು ನಿರ್ದಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಗುಲ್ಬರ್ಗಾದಿಂದ ಡಿ.ಐ.ಜಿ.ಯವರು ಪುನಃ ಪುನಃ ಹೋಗಿ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ನಾವು ಆದೇಶ ಕೊಟ್ಟಿದ್ದೇವೆ. ಸ್ವಲ್ಪ ದಿವಸ ನೋಡೋಣ. ಪರಿಸ್ಥಿತಿ ಸುಧಾರಿಸದಿದ್ದರೆ ಬೇರೆ ಉಪಾಯ ಹುಡುಕೋಣ.

ಶ್ರೀ ಬಸವರಾಜ ಹವಗಪ್ಪ ಪಾಟೀಲ್.— ಮಟ್ಕಾ ಹಾವಳಿ ಕಡಿಮೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದ್ದರೂ ಕಡಿಮೆಯಾಗಿಲ್ಲ. ಇನ್ನೂ ಹೆಚ್ಚಾಗಿ ನಡೆಯುತ್ತಿದೆ. ಆದ್ದರಿಂದ ದಯಮಾಡಿ ಕ್ರಮ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಆಯಿತು.

6. ಮನವಿಗಳು

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ರೂಲ್ 334ರಲ್ಲಿ ಯಾದ್‌ಗಿರ್ ಮುನ್ಸಿಪಾಲಿಟಿ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಈಗ ವಿವರ ಇಲ್ಲ, ಆಮೇಲೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು.